# ವಸಾಹತುಶಾಹಿ ಸಂದರ್ಭ ಕನ್ನಡ ಗ್ರಂಥಮಾಲೆಗಳು

**ಶಿಲ್ಪ ಎಸ್.**
ಸಹಾಯಕ ಪ್ರಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಾಲೂರು.

DOI: https://doi.org/10.5281/zenodo.17960170

## ABSTRACT:

ವಸಾಹತುಶಾಹಿ ಸಂದರ್ಭದಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಕ್ರೈಸ್ತ ಮಿಷನರಿಗಳು (Christian Missionaries) ಮತ್ತು ಬ್ರಿಟಿಷ್ ಅಧಿಕಾರಿಗಳ ಪಾತ್ರವನ್ನು ಈ ಲೇಖನವು ವಿಶ್ಲೇಷಿಸುತ್ತದೆ. ಅವರ ಮುಖ್ಯ ಉದ್ದೇಶ ಮತಪ್ರಚಾರವಾಗಿದ್ದರೂ, ಅವರು ಹಸ್ತಪ್ರತಿಗಳನ್ನು ಸಂಗ್ರಹಿಸಿ, ಸಂಪಾದಿಸಿ, ಮುದ್ರಣಕ್ಕೆ (Printing) ತರುವ ಮೂಲಕ ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ ನೀಡಿದರು.

ಈ ಕಾರ್ಯವನ್ನು ಸುಗಮಗೊಳಿಸಲು ಹಲವು ಗ್ರಂಥಮಾಲೆಗಳನ್ನು (Book Series) ಸ್ಥಾಪಿಸಲಾಯಿತು. ಪ್ರಮುಖವಾಗಿ ಹರ್ಮನ್ ಮೊಗ್ಲಿಂಗ್ ಪ್ರಾರಂಭಿಸಿದ 'ಬಿಬ್ಲಿಯಾಥೆಕಾ ಕರ್ನಾಟಿಕ' ಮಾಲೆ (ಜೈಮಿನಿ ಭಾರತ, ದಾಸರ ಪದಗಳ ಪ್ರಕಟಣೆ), ಬಿ. ಎಲ್. ರೈಸ್ ಅವರ 'ಎಪಿಗ್ರಾಫಿಯ ಕರ್ನಾಟಿಕ' ಮಾಲೆ (ಶಾಸನಗಳ ಸಂಗ್ರಹ) ಮತ್ತು ಓರಿಯಂಟಲ್ ಲೈಬ್ರರಿಯ 'ಕನ್ನಡ ಗ್ರಂಥಮಾಲೆ' (ಆದಿಪುರಾಣ, ಚಂಪೂ ಕಾವ್ಯಗಳ ಪ್ರಕಟಣೆ) ಉಲ್ಲೇಖಾರ್ಹವಾಗಿವೆ. ಇದರ ಜೊತೆಗೆ ಫ. ಗು. ಹಳಕಟ್ಟಿಯವರ 'ಶಿವಾನುಭವ ಗ್ರಂಥಮಾಲೆ' ಸಹ ಮಹತ್ವದ ವೀರಶೈವ ಸಾಹಿತ್ಯವನ್ನು ಪ್ರಕಟಿಸಿತು. ಈ ಮಾಲೆಗಳು ಕನ್ನಡ ಸಾಹಿತ್ಯವನ್ನು ವ್ಯವಸ್ಥಿತವಾಗಿ ಬೆಳಕಿಗೆ ತಂದು, ಹೊಸಗನ್ನಡ ಸಾಹಿತ್ಯದ ಉದಯಕ್ಕೆ ಕಾರಣವಾದವು.

## KEYWORDS:

ಕ್ರೈಸ್ತ ಮಿಷನರಿಗಳು, ಗ್ರಂಥಮಾಲೆಗಳು, ಬಿಬ್ಲಿಯಾಥೆಕಾ ಕರ್ನಾಟಿಕ, ಎಪಿಗ್ರಾಫಿಯ ಕರ್ನಾಟಿಕ, ಕನ್ನಡ ಮುದ್ರಣ.

ವಸಾಹತುಶಾಹಿ ಸಂರ್ಭದಲ್ಲಿ ಹೊಸಗನ್ನಡ ಸಾಹಿತ್ಯ ಕ್ಷೇತ್ರಕ್ಕೆ ಕ್ರೈಸ್ತಮಿಷನ್‌ಗಳ ಪಾತ್ರ ಹಿರಿದಾದದ್ದು. ಅವರ ಉದ್ದೇಶ ಮತಪ್ರಚಾರವಾದದ್ದೇ ಆಗಿದ್ದರೂ 18–19ನೇ ಶತಮಾನದ ಆರಂಭದಲ್ಲಿ ಜರ್ಮನಿಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಬಂದ ಮಿಷನರಿಗಳನ್ನು ಕನ್ನಡ ಸಾಹಿತ್ಯದ ಮಟ್ಟಿಗೆ ನಾವು ಸ್ಮರಿಸಿಕೊಳ್ಳಲೇಬೇಕು. ಅವರಲ್ಲಿ ಪ್ರಮುಖ ಹೆಸರುಗಳೆಂದರೆ, ಹರ್ಮನ್ ಮೋಗ್ಲಿಂಗ್, ಹೆಚ್. ಜೆ. ವೈಗ್ಲೆ, ಫರ್ಡಿನಾಂಡ್ ಕಿಟೆಲ್, ಜಾನ್ ಗ್ಯಾರೆಟ್, ಬಿ. ಲೂಯಿಸ್ ರೈಸ್, ಮೊದಲಾದವರು. ಕನ್ನಡ ಹಸ್ತಪ್ರತಿಗಳ ಸಂಗ್ರಹ, ಗ್ರಂಥಸಂಪಾದನೆಯ ಕಾರ್ಯ ಮತ್ತು ಮುದ್ರಣವನ್ನು ಇವರೆಲ್ಲಾ ಮನೋಜ್ಞವಾಗಿ ಮಾಡಿದ್ದಾರೆ. ಈ ಕಾರ್ಯ ಸುಗಮವಾಗಿ ನಡೆಯಲು ಹಸ್ತಪ್ರತಿಗಳನ್ನು ಪ್ರಕಟಿಸುವ ನಿಟ್ಟಿನಲ್ಲಿ ಕೈಬರಹದಿಂದ ಅಚ್ಚಿನ ರೂಪಕ್ಕೆ ತರುವ ಉದ್ದೇಶದಿಂದ ಹಲವಾರು 'ಗ್ರಂಥಮಾಲೆ'ಗಳನ್ನು ಪ್ರಾರಂಭಿಸಿದರು. ಈ ಮಾಲೆಗಳ ಕೆಳಗೆ ಅನೇಕ ಹಸ್ತಪ್ರತಿಗಳು ಗ್ರಂಥರೂಪವನ್ನು ಪಡೆದುಕೊಳ್ಳಲು ಸಾಧ್ಯವಾಯಿತು. ಹೀಗೆ ಸಾಲು ಸಾಲು ಹಸ್ತಪ್ರತಿಗಳು ಮುದ್ರಣಗೊಂಡು ಪುಸ್ತಕಗಳರೂಪ ಪಡೆಯಲು ಪ್ರಾರಂಭವಾಯಿತು. ಪ್ರಸ್ತುತ ಲೇಖನದಲ್ಲಿ ವಸಾಹತುಶಾಹಿ ಸಂರ್ಭದಲ್ಲಿ ಪ್ರಕಟವಾದ ಕನ್ನಡ ಗ್ರಂಥಮಾಲೆಗಳನ್ನು ಕುರಿತು ಚರ್ಚಿಸಲಾಗಿದೆ.

**"ಬಿಬ್ಲಿಯಾಥೆಕಾ ಕರ್ನಾಟಿಕ" ಗ್ರಂಥಮಾಲೆ:** "ಈ ಗ್ರಂಥಮಾಲೆಗೆ ನಾಂದಿ ಹಾಡಿದವರು

ಮೋಗ್ಲಿಂಗ್. ಮದ್ರಾಸ್ ಪ್ರಾಂತ್ಯದಲ್ಲಿ ನ್ಯಾಯಧೀಶರಾಗಿ ನಿವೃತ್ತರಾಗಿದ್ದ ಕೆಸಮೈಜರ ಸೂಚನೆಯ ಮೇರೆಗೆ ಮೊಗ್ಲಿಂಗ್ ಈ ಪ್ರಸ್ತಾಪವನ್ನು ಬಿ. ಎಲ್ ರೈಸರು ಮೈಸೂರು ಗೆಜೆಟಿಯರ್‌ನಲ್ಲಿ ತಿಳಿಸಿದ್ದಾರೆ. "(ಶ್ರೀನಿವಾಸ ಹಾವನೂರ–ಹೊಸಗನ್ನಡದ ಅರುಣೋದಯ, ಪು. ಸ. 112) ಮುಂದೆ ಈ ಮಾಲಿಕೆಯ ಅಡಿಯಲ್ಲಿ ಬಿ. ಎಲ್ ರೈಸ್‌ಅವರು ಶ್ರಮವಹಿಸಿ ದುಡಿದಿದ್ದಾರೆ.

ಈ ಮಾಲಿಕೆಯ ಮೊದಲ ಪ್ರಕಟಣೆ ಎಂದರೆ 'ಜೈಮಿನಿ ಭಾರತ'(1848). ಮರುವರ್ಷ ತೊರವೆ ರಾಮಾಯಣವನನು ಎತ್ತಿಕೊಳ್ಳಲಾಯಿತು. ಅದರ 204 ಪುಟಗಳನ್ನು ಮುದ್ರಿಸಿಯೂ ಆಗಿತ್ತು. ಆದರೆ ಮದ್ರಾಸ ಸರಕಾರದ ವಶದಲ್ಲಿದ್ದ ಹಸ್ತಪ್ರತಿಗಳ ಸಂಗ್ರಹವೊಂದು ಬರಲಿದ್ದು ಆ ಮೂಲಕ ಇದನ್ನು ಪರಿಷ್ಕರಿಸಲೆಂದಿಟ್ಟುಕೊಂಡದ್ದರಿಂದ ಇದರ ಮುದ್ರಣವು ಅಷ್ಟಕ್ಕೆ ನಿಂತಿತು. ಈ ವಿಚಾರವನ್ನು ಶ್ರೀನಿವಾಸ ಹಾವನೂರವರು ಹೊಸಗನ್ನಡದ ಅರುಣೋದಯ ಕೃತಿಯಲ್ಲಿ ನಮೂದಿಸಿದ್ದಾರೆ. ಇದನ್ನು ಗಮನಿಸಿದರೆ. ಈ ಗ್ರಂಥಮಾಲೆಗಳಡಿಯಲ್ಲಿ ಕೃತಿಗಳ ಪ್ರಕಟಣೆಯಷ್ಟೇ ಅಲ್ಲದೆ. ಬೇರೆ ಬೇರೆಕಡೆಗಳಲ್ಲಿ ಕನ್ನಡ ಕವಿಗಳ ಹಸ್ತಪ್ರತಿಗಳನ್ನು ಒಂದೆಡೆಗೆ ತರುವುದಷ್ಟೇ ಅಲ್ಲದೆ ಮುದ್ರಣ ರೂಪಕ್ಕೆ ತಂದು ಓದುಗರಿಗೆ ಸುಲಭವಾಗಿ ದೊರಕಲು ಅನುಕೂಲವಾಗುತ್ತಿತ್ತು.

ಕ್ರಿ. ಶ. 1850ರಲ್ಲಿ 'ದಾಸರ ಪದಗಳು' ಎಂಬ ಹಾಡುಗಳ ಸಂಕಲನವು ಹೊರಬಂದಿತು. ಕನ್ನಡದಲ್ಲಿ ದಾಸರ ಹಾಡುಗಳ ಸಂಕಲನವು ಪ್ರಥಮವಾಗಿ ಅಚ್ಚಾದದು ಪಾಶ್ಚಾತ್ಯ ಮಿಷನರಿಗಳಿಂದಲೇ. ಜೊತೆಗೆ ಕನಕದಾಸರ 'ಹರಿಭಕ್ತಿಸಾರವನ್ನು ಈ ಮಾಲಿಕೆಯಲ್ಲೇ ಹೊರತರಲಾಯಿತು. ನಂತರ ಚನ್ನಬಸವ ಪುರಾಣ(1858) ಪ್ರಕಟವಾಯಿತು. ಮೊಗ್ಲಿಂಗ್ ಅವರ ಈ ಮಾಲಿಕೆಯ ಸಂಪಾದನೆ ಮತ್ತು ಪ್ರಕಟಣೆಯ ಸಾಧನೆಗೆ ಟ್ಯುಟಿಂಗನ್ ವಿಶ್ವವಿದ್ಯಾಲಯವು 1858ರಲ್ಲಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಿತು.

ತದನಂತರದಲ್ಲಿ ಬಿ. ಎಲ್ ರೈಸ್ ಅವರು ಶಿಕ್ಷಣ ಇಲಾಖೆಯಲ್ಲಿರುವಾಗ ಈ ಗ್ರಂಥಮಾಲೆಯ ಅಡಿಯಲ್ಲಿ ಹಲವು ಹಸ್ತಪ್ರತಿಗಳನ್ನು ಗ್ರಂಥರೂಪಕ್ಕೆ ತಂದರು. ಪುರಾತತ್ವ ಇಲಾಖೆಯ ನಿರ್ದೇಶಕರಾದ ಬಳಿಕವೂ ಈ ಕೃತಿಗಳನ್ನು ಪ್ರಕಟಿಸಿದರು. ಪಂಪರಾಮಾಯಣ(1874), ಕರ್ನಾಟಕ ಭಾಷಾ ಭೂಷಣಂ(1884), ಕರ್ಣಾಟಕ ಶಬ್ದಾನುಶಾಸನಂ(1890), ಪಂಪಭಾರತ (1891), ಕನ್ನಡ ಸಾಹಿತ್ಯದ ಮೊಟ್ಟಮೊದಲ ಲಕ್ಷಣಗ್ರಂಥವಾದ ಕವಿರಾಜಮಾರ್ಗವು ಮೊದಲ ಸಲ ಬೆಳಕು ಕಂಡದ್ದು ಈಮಾಲಿಕೆಯಲ್ಲಿ. (ಕೆ. ಬಿ. ಪಾಠಕ 1891) ಹೀಗೆ ಇತರೆ ಊರು, ಸಂಸ್ಥಾನದ ಭಂಡಾರಗಳಲ್ಲಿ ಸಂಗ್ರಹಿಸಿದ ಹಸ್ತಪ್ರತಿಗಳನ್ನು ಗ್ರಂಥಮಾಲಿಕೆಗಳ ಅಡಿಯಲ್ಲಿ ಪ್ರಕಟಣೆ ಮಾಡಲಾಗುತ್ತಿತ್ತು.

**ಎಪಿಗ್ರಾಫಿಯ ಕರ್ನಾಟಿಕ ಮಾಲೆ:** ಈ ಮಾಲೆಯನ್ನು ಪ್ರಾರಂಭಿಸಿದವರು ಬಿ. ಎಲ್ ರೈಸ್ ರವರು. ಕರ್ನಾಟಕದಾದ್ಯಂತ ಇದ್ದ ಶಾಸನದ ಕಲ್ಲುಗಳನ್ನು ಗಮನಿಸಿ ಪಡಿಯಚ್ಚು ತೆಗೆಸಿ, ಓದಿಸಿ ಸಂಗ್ರಹಿಸಿದ ಶಾಸನಗಳನ್ನು ಎಪಿಗ್ರಾಫಿಯ ಕರ್ನಾಟಿಕ ಮಾಲೆಯಡಿಯಲ್ಲಿ ಒಟ್ಟು ಹನ್ನೆರಡು ಸಂಪುಟಗಳನ್ನು ಪ್ರಕಟಿಸಿದ್ದಾರೆ.

- 1886ರಲ್ಲಿ ಇನ್‌ಸ್ಕ್ರಿಪ್‌ಷನ್ ಫ್ರಮ್ ಕೂರ್ಗ್
- 1889ರಲ್ಲಿ ಇನ್‌ಸ್ಕ್ರಿಪ್‌ಷನ್ಸ್ ಆಫ್ ಶ್ರವಣಬೆಳಗೊಳ
- 1894ರಲ್ಲಿ ಇನ್‌ಸ್ಕ್ರಿಪ್‌ಷನ್ಸ್ ಇನ್ ದ ಮೈಸೂರು ಡಿಸ್ಟ್ರಿಕ್ಟ್, ಭಾಗ–1 (ಮಂಡ್ಯ ಜಿಲ್ಲೆ ಶಾಸನಗಳು)
- 1898ರಲ್ಲಿ ಇನ್‌ಸ್ಕ್ರಿಪ್‌ಷನ್ಸ್ ಇನ್ ದ ಮೈಸೂರು ಡಿಸ್ಟ್ರಿಕ್ಟ್, ಭಾಗ–2 (ಮಂಡ್ಯ ಜಿಲ್ಲೆ ಶಾಸನಗಳು)
- 1902ರಲ್ಲಿ ಇನ್‌ಸ್ಕ್ರಿಪ್‌ಷನ್ಸ್ ಫ್ರಮ್ ಹಾಸನ ಡಿಸ್ಟ್ರಿಕ್ಟ್
- 1901ರಲ್ಲಿ ಇನ್‌ಸ್ಕ್ರಿಪ್‌ಷನ್ಸ್ ಫ್ರಮ್ ಕಡೂರು ಡಿಸ್ಟ್ರಿಕ್ಟ್

- 1902ರಲ್ಲಿ ಇನ್‌ಸ್ಕ್ರಿಪ್‌ಷನ್ಸ್ ಶಿವಮೊಗ್ಗ ಡಿಸ್ಟ್ರಿಕ್ಟ್ ಭಾಗ-1 ಭಾಗ-2
- 1902ರಲ್ಲಿ ಇನ್‌ಸ್ಕ್ರಿಪ್‌ಷನ್ಸ್ ಇನ್ ಚಿತ್ರದುರ್ಗ
- 1904ರಲ್ಲಿ ಇನ್‌ಸ್ಕ್ರಿಪ್‌ಷನ್ಸ್ ಇನ್ ತುಮಕೂರು
- 1905ರಲ್ಲಿ ಇನ್‌ಸ್ಕ್ರಿಪ್‌ಷನ್ಸ್ ಇನ್ ಬೆಂಗಳೂರು ಡಿಸ್ಟ್ರಿಕ್ಟ್
- 1906ರಲ್ಲಿ ಇನ್‌ಸ್ಕ್ರಿಪ್‌ಷನ್ಸ್ ಇನ್ ಕೋಲಾರ ಡಿಸ್ಟ್ರಿಕ್ಟ್

ಹೀಗೆ ಎಪಿಗ್ರಾಫಿಯ ಕರ್ನಾಟಿಕ ಮಾಲಿಕೆಯಲ್ಲಿ ಕರ್ನಾಟಕದಾದ್ಯಂತ ದೊರೆತ ಶಾಸನಗಳನ್ನು ಗ್ರಂಥರೂಪಕ್ಕೆ ತಂದು ಪ್ರಕಟಿಸಿದ್ದು ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟುವಲ್ಲಿ ಕನ್ನಡ ಸಾಹಿತ್ಯದ ಚರಿತ್ರೆಯನ್ನು ಗುರುತಿಸಲು ಅನುಕೂಲವಾಯಿತೆಂದರೆ ತಪ್ಪಾಗದು.

**"ಕನ್ನಡ ಗ್ರಂಥಮಾಲೆ":** ಓರಿಯಂಟಲ್ ಲೈಬ್ರರಿ ಅಸ್ತಿತ್ವಕ್ಕೆ ಬಂದ ಹೊಸದರಲ್ಲಿ ಬಿಬ್ಲಿಯಾಥಿಕಾ ಕರ್ನಾಟಿಕ ಗ್ರಂಥಮಾಲೆಯನ್ನೇ ಅನುಸರಿಸಿತ್ತು. ತದನಂತರದಲ್ಲಿ "ಕನ್ನಡ ಗ್ರಂಥಮಾಲೆ" ಹೆಸರಿನಲ್ಲಿ ಪ್ರಥಮ ಕೃತಿಯಾಗಿ ಆದಿಪುರಾಣವನ್ನು(1900) ಹೊರತಂದಿತು. ಆನಂತರ ದಶ ಕುಮಾರ ಚರಿತ, ಜಗನ್ನಾಥ ವಿಜಯ, ಧರ್ಮಾಮೃತ, ಅನಂತನಾಥಪುರಾಣ, ಸೂಕ್ತಿಸುಧಾರ್ಣವ, ಸಿಂಗಿರಾಜಪುರಾಣ, ರಾಮನಾಥ ಚರಿತೆ, ಶಿವತತ್ವ ಚಿಂತಾಮಣಿ, ತೊರವೆರಾಮಾಯಣ ಕೃತಿಗಳನ್ನು ಈ ಗ್ರಂಥಮಾಲೆಯ ಅಡಿಯಲ್ಲಿ ಹೊರತಂದಿತು. ಈ ಓರಿಯಂಟಲ್ ಲೈಬ್ರರಿಯು 'ಬಿಬ್ಲಿಯಾಥಿಕಾ ಸಂಸ್ಕೃತ' ಹೆಸರಿನ ಮಾಲೆಯಲ್ಲಿ ಆಪಸ್ತಂಭ ಗೃಹ್ಯ ಸೂತ್ರ ಮತ್ತು ಕೌಟಿಲ್ಯನ ಅರ್ಥಶಾಸ್ತ್ರವನ್ನು ಪ್ರಕಟಿಸಿತು.

**ಶಿವಾನುಭವ ಗ್ರಂಥಮಾಲೆ:** ಫ. ಗು ಹಳಕಟ್ಟಿಯವರು 'ಶಿವಾನುಭವ' ಪತ್ರಿಕೆಯನ್ನು 1926ರಲ್ಲಿ ಪ್ರಾರಂಭಿಸುತ್ತಾರೆ. ಶಿವಾನುಭವದಲ್ಲಿ ವಿಚಾರ ವಿನಿಮಯದ ಲೇಖನಗಳು ಹೆಚ್ಚಾಗಿ ಪ್ರಕಟಗೊಂಡಿದ್ದವು. ಪ್ರಾರಂಭದಲ್ಲಿ ಪತ್ರಿಕೆಯ ಲೇಖನಗಳ ಮೂಲಕ ಜನರನ್ನು ತಲುಪುತ್ತಿದ್ದದ್ದು, ತದನಂತರದಲ್ಲಿ ಸ್ವತಃ ಹಳಕಟ್ಟಿಯವರೇ 'ಶಿವಾನುಭವ ಗ್ರಂಥಮಾಲೆ'ಯಡಿಯಲ್ಲಿ ಬಸವ, ಅಲ್ಲಮರ ವಚನಗಳು, ಶಿವಶರಣ ಚರಿತ್ರೆಗಳ ಭಾಗಗಳನ್ನು, ಶಿವಾನುಭವ ಶಬ್ದಕೋಶ, ಹರಿಹರನ ರಗಳೆಗಳು ಮುಂತಾದ 25ಕ್ಕೂ ಹೆಚ್ಚಿನ ಗ್ರಂಥಗಳನ್ನು ಈ ಪತ್ರಿಕೆಯ ಮೂಲಕ ಪ್ರಕಾಶನ ಪಡಿಸಿದ್ದಾರೆ. ಈ ಮೂಲಕ ಉತ್ತರ ಕರ್ನಾಟಕದ ವೀರಶೈವ ಕೃತಿಗಳ ಗ್ರಂಥ ಪರಿಷ್ಕರಣೆ, ವೀರಶೈವ ಸಾಹಿತ್ಯದ ಸಂಶೋಧನೆ, ಇತಿಹಾಸ, ವೀರಶೈವ ಅರಸರು ಶಿವಾನುಭವ ಪತ್ರಿಕೆಯೊಂದಿಗೆ ಬೆರೆತುಹೋಗಿದೆ.

**ಕರ್ನಾಟಕ ಗ್ರಂಥಮಾಲೆ:** ಮೈಸೂರಿನ ಹಲವು ಪದವೀಧರರು ಸೇರಿ 1893ರ ಹೊತ್ತಿಗೆ ಪ್ರಕಟಣೆ ಸರಣಿಯನ್ನು ಪ್ರಾರಂಭಿಸಿದರು. ಇದು ಸುಮಾರು ಮೂರು ದಶಕಗಳ ಕಾಲ ಕೆಲಸ ನಿರ್ವಹಿಸಿತು. ಈ ಪತ್ರಿಕೆಯ ಪ್ರತಿಯೊಂದು ಸಂಚಿಕೆಯಲ್ಲಿಯೂ ಹಲವು ಕಾದಂಬರಿ, ನಾಟಕಗಳನ್ನು ಪ್ರಕಟಿಸಲಾಗುತ್ತಿತ್ತು. ಈ ಗ್ರಂಥಮಾಲೆಯ ಆರಂಭದ ಕಾರ್ಯಕರ್ತರೆಂದು ಎಲ್. ಜಯರಾವ, ಎಂ. ಶಾಮರಾವ(1860-1939), ಬಾಪು ಸುಬ್ಬರಾಯ ಮತ್ತು ಅಪ್ಪಣ್ಣ ಶೆಟ್ಟಿ ಇವರನ್ನು ಹೆಸರಿಸಬಹುದು.

**ಪರಾಮರ್ಶನ ಗ್ರಂಥಗಳು:**

1. ಶ್ರೀನಿವಾಸ ಹಾವನೂರ–ಹೊಸಗನ್ನಡದ ಅರುಣೋದಯ,
2. ಎಂ. ಎಂ. ಕಲಬುರ್ಗಿ – ಕನ್ನಡ ಹಸ್ತಪ್ರತಿಶಾಸ್ತ್ರ, ಸಪ್ನಬುಕ್ ಹೌಸ್ –2012
3. ಬಿ. ಎಸ್. ಸಣ್ಣಯ್ಯ – ಪ್ರಾಚೀನ ಕನ್ನಡ ಗ್ರಂಥ ಸಂಪಾದನೆ, ಕನ್ನಡ ಪುಸ್ತಕ ಪ್ರಾಧಿಕಾರ 2002

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4. 0 International License.